ಒಂದು ಸಭೆಯಲ್ಲಿ ರಾಜಕೀಯ ಮುಖಂಡರೊಬ್ಬರು ಭಾಷಣ ಬಿಗಿಯುತ್ತಿದ್ದರು. ಅರ್ಧ ಗಂಟೆಯಾದರೂ ಅವರು ಭಾಷಣವನ್ನು ಮುಗಿಸುವ ಲಕ್ಷಣ ಕಾಣ ಬರದಿದ್ದಾಗ, ಶ್ರೋತೃಗಳು ಒಬ್ಬೊಬ್ಬರಂತೆ ಜಾಗ ಖಾಲಿ ಮಾಡಿದರು. ಕಡೆಗೆ ಮೂರು ಜನ ಮಾತ್ರ ಉಳಿದರು. ಆಗ ಮುಖಂಡರು ಅವರನ್ನು ನೋಡುತ್ತಾ, ಅವರನ್ನು ಹುರಿದುಂಬಿಸುತ್ತಾ ಹೇಳಿದರು, 'ಶ್ರೋತೃಗಳೆಂದರೆ ನೀವು, ನಿಮಗೆ ಸಭೆಯ ಮರ್ಯಾದೆ ತಿಳಿದಿದೆ.'

ಆಗ ಅವರಲ್ಲಿದ್ದ ಒಬ್ಬ ಎದ್ದು ಹೇಳಿದ, 'ಹಾಗೇನಿಲ್ಲ ಸರ್, ನಾವೇನು ಶ್ರೋತೃಗಳಲ್ಲ! ನಿಮ್ಮ ಭಾಷಣ ಮುಗಿದ ನಂತರ ನನ್ನ ಭಾಷಣವಿದೆ, ನನ್ನ ಭಾಷಣದ ನಂತರ, ನನ್ನ ಪಕ್ಕದಲ್ಲಿದ್ದಾರಲ್ಲ, ಅವರ ಭಾಷಣವಿದೆ. ಕಡೆಗೆ ಆಚೆಗೆ ಕೂತಿದ್ದಾರಲ್ಲ, ಅವರ ಭಾಷಣವಿದೆ!'

***




1 ಕೇಜಿ ಹಲಾಲ್ ಕಟ್ ಚಿಕನ್ ಕೊಡಿ

ಒಂದು ಹಳ್ಳಿಯಲ್ಲಿ ಓರ್ವ ಕಣ್ಣುಪರೀಕ್ಷಕರು ತಮ್ಮ ಕ್ಲಿನಿಕ್ ತೆರೆದಿದ್ದರು. ಅದೊಂದು ದಿನ ಓರ್ವ ಕಣ್ಣು ಪರೀಕ್ಷೆ ಮಾಡಿಸಿಕೊಳ್ಳಲು ಬಂದ. ವೈದ್ಯರು ಅವನ ಕಣ್ಣುಗಳನ್ನು ಪರೀಕ್ಷಿಸಿದ ನಂತರ ಅವನಿಗೆ ಸಲಹೆಯಿತ್ತರು, 'ನೀವು ಕನ್ನಡಕ ಹಾಕಿಕೊಳ್ಳಬೇಕಾಗುತ್ತೆ.'

'ನಾನು ಕನ್ನಡಕ ಹಾಕ್ಕೊಂಡ್ರೆ ಓದಬಹುದೇ?'

'ಓಹೋ, ಧಾರಾಳವಾಗಿ.' ಎಂದರು ವೈದ್ಯರು.

'ಸದ್ಯ, ಒಳ್ಳೆ ಸುದ್ದಿ ಹೇಳಿದ್ರಿ. ನನಗೆ ಇದುವರೆಗೆ ಓದಲು ಬರ್ತಿರಲಿಲ್ಲ!'

***

ಒಬ್ಬ ಕುಡುಕ ಬಾರ್ಗೆ ಹೋಗಿ ಮನಸಾರೆ ಕುಡಿದ. ಬೇರರ್ ಬಿಲ್ ತಂದಾಗ, ಕುಡುಕ ತಡಕಾಡಿದ. ಮ್ಯಾನೇಜರ್ಗೆ ಅವನ ಬಳಿ ಹಣವಿಲ್ಲದ ವಿಷಯ ತಿಳಿಯಿತು. ಅವರು ಅವನನ್ನು ಸಿಟ್ಟಿನಿಂದ ನಿಂದಿಸಿ ಹೊರ ತಳ್ಳಿಸಿದರು. ಆದರೆ ಆ ಕುಡುಕ ಓಲಾಡುತ್ತಾ ಬಂದು ಬಾರ್ ಒಳಗೆ ಬರಲು ಪ್ರಯತ್ನಿಸಿದಾಗ ಮ್ಯಾನೇಜರ್ ಅವನನ್ನು ಮತ್ತೆ ಹೊರ ತಳ್ಳಿಸಿದರು. ಹೀಗೆ ನಾಲ್ಕನೆಯ ಬಾರಿ ಅವನನ್ನು ಹೊರಗೆ ತಳ್ಳಿಸಲು ಪ್ರಯತ್ನಿಸಿದಾಗ ಕುಡುಕ ತುಂಬಾ ರೇಗಿ ತಡಬಡಿಸುತ್ತಾ ಹೇಳಿದ, 'ಏನ್... ಎನ್ರಿ.... ತಮಾಷೆ ಮಾಡ್ತಿದ್ದೀರ? ಎಲ್ಲಾ... ಎ...ಲ್ಲಾ.... ಬಾರ್.... ಬಾರ್ರ್....ಗಳೂ ನಿಮ್ದಾ?'

***

ಬೆಂಗಳೂರಿನ ಒಂದು ಹೋಟೇಲ್‌ನಲ್ಲಿ ಅಮೆರಿಕದ ಇಬ್ಬರು ಯುವಕರು ಊಟ ಮಾಡಲು ಬಂದು ಕೂತರು. ಬೇರರ್ ಊಟದ ತಟ್ಟೆಯೊಂದಿಗೆ ಹಸುರು ತರಕಾರಿಯ ಪಚ್ಚಡಿಯಿದ್ದ ಒಂದೊಂದು ಪ್ಲೇಟನ್ನೂ ಇಟ್ಟು ಹೋದ. ಪಚ್ಚಡಿಯಲ್ಲಿ ಒಂದೊಂದು ಹಸಿಮೆಣಸಿನ ಕಾಯಿ ಸಹ ಇತ್ತು. ಆ ಅಮೆರಿಕನ್ನರು ಅಂಥ ಹಸಿಮೆಣಸಿನ ಕಾಯಿಯನ್ನು ಈ ಹಿಂದೆ ನೋಡಿರಲಿಲ್ಲ. ಒಬ್ಬ ಹಸಿಮೆಣಸಿನ ಕಾಯಿಯನ್ನು ತೆಗೆದುಕೊಂಡು ಬಾಯಿಗೆ ಹಾಕಿ ಅಗಿದ. ಮೆಣಸಿನ ಕಾಯಿ ತನ್ನ ಪ್ರಭಾವವನ್ನು ಬೀರಿತು. ಅವನ ಕಣ್ಣುಗಳಿಂದ ಮತ್ತು ಮೂಗಿನಿಂದ ನೀರು ಹರಿಯಿತು. 'ಏಕೆ ಅಳ್ತಿದ್ದೀಯ?' ಇನ್ನೊಬ್ಬ ಅಮೆರಿಕನ್ ತನ್ನ ಮಿತ್ರನನ್ನು ಪ್ರಶ್ನಿಸಿದ.

ಮೊದಲನೆಯ ಅಮೆರಿಕನ್ ನಿಜ ವಿಷಯವನ್ನು ಮರೆಮಾಚುತ್ತಾ ಹೇಳಿದ, 'ಅಮೆರಿಕದಲ್ಲಿ ನನ್ನಜ್ಜ ಒಂದು ಚಳವಳಿಯಲ್ಲಿ ಭಾಗವಹಿಸಿದ್ದರು, ಅದಕ್ಕಾಗಿ ಅವರನ್ನು ಗಲ್ಲಿಗೆ ಹಾಕಿದರು. ಅದು ನೆನಪಾಗಿ ದುಃಖವಾಗ್ತಿದೆ.'

ಸ್ವಲ್ಪ ಹೊತ್ತಿನ ನಂತರ ಎರಡನೆಯ ಅಮೆರಿಕನ್ ಯುವಕ ತನ್ನ ಪ್ಲೇಟಿನಲ್ಲಿದ್ದ ಮೆಣಸಿನ ಕಾಯಿಯನ್ನು ಬಾಯಿಗೆ ಹಾಕಿ ಅಗಿದ. ಆ ಮೆಣಸಿನ ಕಾಯಿಯೂ ತನ್ನ ಪ್ರಭಾವವನ್ನು ಬೀರಿತು. ಅವನ ಕಣ್ಣುಗಳಿಂದ ಮತ್ತು ಮೂಗಿನಿಂದ ಸಹ ನೀರು ಹರಿಯಿತು.

'ಈಗ ನೀನೇಕೆ ಅಳ್ತಿದೀಯ?' ಮೊದಲನೆಯ ಅಮೆರಿಕನ್ ಯುವಕ ಪ್ರಶ್ನಿಸಿದ.

'ನಿನಗೂ ನಿನ್ನ ಅಜ್ಜನೊಂದಿಗೇ ಜೈಲಿಗೆ ಏಕೆ ಹಾಕಲಿಲ್ಲವೆಂದು ಅಳ್ತಿದ್ದೇನೆ!' ಎಂದ ಎರಡನೆಯ ಅಮೆರಿಕನ್ ಯುವಕ.

***

ಆಗತಾನೇ ವೃತ್ತಿಗಿಳಿದ ವೈದ್ಯರೊಬ್ಬರು ರೋಗಿಯೊಬ್ಬರನ್ನು ಪರೀಕ್ಷಿಸಿದ ನಂತರರ ಹೇಳದರು, 'ಈ ಕೂಡಲೇ ನಿಮ್ಮ ರೋಗದ ಕಾರಣವನ್ನು ಹೇಳಲು ಸಾಧ್ಯವಿಲ್ಲ. ಸ್ಪಷ್ಟವಾಗಿ ಹೇಳಬೇಕೆಂದರೆ ನನಗೆ ಇದು ಮದ್ಯ ಸೇವನೆಯ ಪರಿಣಾಮ...'

'ಹಾಗಾದ್ರೆ, ನಿಮ್ಮ ಅಮಲು ಇಳಿದ ನಂತರ ಬರ್ತೀನಿ!' ಎಂದು ರೋಗಿ ಹೊರಟು ಹೋದ.

ಹಿಂದಿಯಿಂದ ಸಂಗ್ರಹ: ಡಿ.ಎನ್. ಶ್ರೀನಾಥ್

